# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/10/2020–21 ದಿನಾಂಕ : 06/03/2021

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020–21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 06/03/2021 ರಂದು ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ಬಾಬು ರೆಡ್ಡಿ ಕೆ.ಎನ್, ಕಿರಿಯ ಅಭಿಯಂತರರು, (ವಿದ್ಯುತ್), ಬಿಬಿಎಂಪಿ
4. ಶ್ರೀ ಲಕ್ಷ್ಮೀಕಾಂತ್, ಸಹಾಯಕ ಅಭಿಯಂತರರು, ಬೆಸ್ಕಾಂ
5. ಶ್ರೀ ವೀರಸ್ವಾಮಿ, ಸಹಾಯಕ ಅಭಿಯಂತರರು, ಬೆಸ್ಕಾಂ
6. ಶ್ರೀ ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
7. ಶ್ರೀ ಜೀವನ್ ಎನ್, ಪಿ.ಎಸ್.ಐ, ಅರಕ್ಷಕ ಠಾಣೆ, ವಿದ್ಯಾರಣ್ಯಪುರ
8. ಶ್ರೀ ಬಾಡಿಗರ್, ಹೆಡ್‌ಕಾನ್ಸ್‌ಟೇಬಲ್, ಯಲಹಂಕ ಟ್ರಾಫಿಕ್ ಪೋಲೀಸ್

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ಸೋಮನಾಥ್ ಎಸ್ ಜಾಧವ್, ಸಹಾಯಕ ಅಭಿಯಂತರರು:–** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು**

ಬಿ.ಇ.ಎಲ್ ಲೇಔಟ್, ಹೆಚ್.ಎಂ.ಟಿ ಲೇಔಟ್‌ಗಳಲ್ಲಿ ನೀರು ಪೂರೈಕೆಯಾಗುವಾಗ ವಿದ್ಯುತ್ ವ್ಯತ್ಯಯ ಉಂಟಾಗಿ ನೀರು ಸರಬರಾಜಾಗುತ್ತಿರುವುದಿಲ್ಲ ಬುಲೆಟ್ ಕೃಷ್ಣಪ್ಪ ಬಡಾವಣೆಯಲ್ಲಿ ನೀರು ಸರಬರಾಜಾಗುತ್ತಿರುವುದಿಲ್ಲವೆಂದು, ಮುನಿಸ್ವಾಮಪ್ಪ ಬಡಾವಣೆಯಲ್ಲಿ ಕಾವೇರಿ ನೀರು ಸರಬರಾಜಾಗುತ್ತಿರುವುದಿಲ್ಲವೆಂದು ಹಾಗೂ ಏರು ಪ್ರದೇಶಗಳಲ್ಲಿ ನೀರು ಸರಬರಾಜಾಗುತ್ತಿರುವುದಿಲ್ಲವೆಂದು ಸರಿಪಡಿಸಲು ಕೋರಿದರು.

ಕೆಂಪೇಗೌಡನಗರದಲ್ಲಿ ಒಳಚರಂಡಿ ಕಾಮಗಾರಿಗೆ ಅನುಮೋದನೆ ದೊರೆತಿದ್ದರೂ ಕಾಮಗಾರಿ ಪ್ರಾರಂಭಿಸಿರುವುದಿಲ್ಲ ಹಾಗೂ ಮುನಿಸ್ವಾಮಪ್ಪ ಬಡಾವಣೆ ಹಾಗೂ ಗಣೇಶನಗರದಲ್ಲಿ ಒಳಚರಂಡಿ ಲೈನ್ ಬ್ಲಾಕ್ ಆಗಿದ್ದು ಸರಿಪಡಿಸಲು ಕೋರಿದರು.

ವಿದ್ಯಾರಣ್ಯಪುರ ಮುಖ್ಯ ರಸ್ತೆಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ವತಿಯಿಂದ Patch Work ಮಾಡಿರುವ ರಸ್ತೆಯು ರಸ್ತೆ ಮಟ್ಟಕ್ಕಿಂತ ಕುಗ್ಗಿರುವುದಾಗಿ ಸರಿಪಡಿಸಲು ಹಾಗೂ ದುರ್ಗಾ ದೇವಸ್ಥಾನದ ರಸ್ತೆಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ಕಾಮಗಾರಿ ಮುಗಿದಿದ್ದರೂ Patch Work ಮಾಡಿರುವುದಿಲ್ಲವೆಂದು ತಿಳಿಸಿದರು.

ಕ್ರಮ ಸ.ಅ, ಬಿಡಬ್ಲ್ಯೂಎಸ್ಎಸ್‌ಬಿ

ವಿದ್ಯಾರಣ್ಯಪುರ ವ್ಯಾಪ್ತಿಯಲ್ಲಿ ಕೊಳವೆ ಬಾವಿ ಕೊರೆಯುವ ಕಡೆಗಳಲ್ಲಿ ಚರಂಡಿಯಲ್ಲಿ ಸಿಲ್ಟ್ ತುಂಬುತ್ತಿರುವುದಾಗಿ ದೂರು ನೀಡಿದರು.

ಕ್ರಮ : ಬಿಡಬ್ಲ್ಯೂಎಸ್ಎಸ್‌ಬಿ ಹಾಗೂ ಬಿಬಿಎಂಪಿ ರವರು ಜಂಟಿ ಪರಿವೀಕ್ಷಣೆ ಮಾಡಲು ತಿಳಿಸಿದರು.

ಹಳೇ ಪೋಸ್ಟ್ ಆಫೀಸ್ ರಸ್ತೆಯ ಜಂಕ್ಷನ್‌ನಲ್ಲಿ ಅಪಘಾತಗಳು ಹೆಚ್ಚಾಗುತ್ತಿರುವುದರಿಂದ ಹಾಗೂ ಎಂ.ಈ.ಎಸ್ ಕಾಲೇಜ್ ರಸ್ತೆಯಲ್ಲಿ ದ್ವಿಚಕ್ರ ವಾಹನಗಳ ವೇಗ ಚಾಲನೆ, ವ್ಹೀಲಿಂಗ್ ಮಾಡುತ್ತಿರುವುದರಿಂದ ಸಂಚಾರ ನಿಯಂತ್ರಕರನ್ನು ನಿಯೋಜಿಸಲು ಹಾಗೂ ವಿದ್ಯಾರಣ್ಯಪುರ ಮುಖ್ಯ ರಸ್ತೆ ಹಾಗೂ ಎನ್.ಟಿ.ಐ ಲೇಔಟ್ ರೈಲ್ವೆ ಪ್ಯಾರಲಲ್ ರಸ್ತೆಯ 2 ಕಡೆಗಳಲ್ಲಿ ವಾಹನಗಳ ನಿಲುಗಡೆಯಾಗುತ್ತಿರುವುದರಿಂದ ಟ್ರಾಫಿಕ್ ಹೆಚ್ಚಾಗುತ್ತಿದ್ದು ಸಂಚಾರ ನಿಯಂತ್ರಕರನ್ನು ನಿಯೋಜಿಸಲು ಕೋರಿದರು.
ಕ್ರಮ: ಯಲಹಂಕ ಟ್ರಾಫಿಕ್ ಸೆಲ್

ಇತ್ತೀಚೆಗೆ ವಿಗ್ಯಾರಣ್ಯಪುರ ವ್ಯಾಪ್ತಿಯಲ್ಲಿ ಕಳ್ಳತನಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ತಿಳಿಸಿದರು.
ಕ್ರಮ : ಜೀವನ್, ಪಿ.ಎಸ್.ಐ ರವರು ಮನೆಯಲ್ಲಿ ಯಾರು ಇಲ್ಲದ ಸಂದರ್ಭದಲ್ಲಿ ಪೋಲೀಸ್ ಠಾಣೆಗೆ ಮಾಹಿತಿ ನೀಡಿ ಹೋದರೆ ನಮ್ಮ ಇಲಾಖೆಯ ವತಿಯಿಂದ ಬೀಟ್ ಬುಕ್ ಅಥವಾ ಪೋಲೀಸ್ ರವರನ್ನು ನಿಯೋಜಿಸಿದಾಗ ಕಳ್ಳತನಕ್ಕೆ ಅವಕಾಶವಿರುವುದಿಲ್ಲವೆಂದು ಹಾಗೂ ಪೋಲೀಸ್ ಕಂಟ್ರೋಲ್ ರೂಂ ನಂ 112 ಕ್ಕೆ ಕರೆ ಮಾಡಿದ 10 ನಿಮಿಷಗಳ ಒಳಗಾಗಿ ಹೊಯ್ಸಳ ರವರು ಸ್ಥಳಕ್ಕೆ ಹಾಜರಿರುವುದರಿಂದ ಕಳ್ಳತನ ಪ್ರಕರಣಗಳನ್ನು ಕಡಿಮೆ ಮಾಡಬಹುದು ಎಂದು ಜನರಲ್ಲಿ ಅರಿವು ಮೂಡಿಸಿದರು.

ವಿದ್ಯಾರಣ್ಯಪುರ ವ್ಯಾಪ್ತಿಯ ಆನಂದ್‌ಶೆಟ್ಟಿ ಉದ್ಯಾನವನದಲ್ಲಿ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಲು, ಮಕ್ಕಳ ಉದ್ಯಾನವನವನ್ನು ಆಗಾಗ ಶುಚಿಗೊಳಿಸಲು, ಓಪನ್ ಜಿಮ್‌ನ ಉಪಕರಣಗಳನ್ನು ನಿರ್ವಹಣೆ ಮಾಡಲು, ತಿಂಡ್ಲು ಉದ್ಯಾನವನದಲ್ಲಿ ನೀರನ್ನು ಸರಬರಾಜು ಮಾಡಲು, ಜ್ಞಾನೇಶ್ವರಿ ಬಡಾವಣೆಯ ಉದ್ಯಾನವನದ ನಿರ್ವಹಣೆ ಹಾಗೂ ನಾಮಫಲಕಗ್ಗಳನ್ನು ಅಳವಡಿಸಲು ಕೋರಿದರು.
ಕ್ರಮ: ಅಧೀಕ್ಷಕರು, ತೋಟಗಾರಿಕೆ

ರಾಜಕಾಲುವೆಯನ್ನು ಶುಚಿಗೊಳಿಸಲು, ರಾಜಕಾಲುವೆಯ ಮೇಲೆ ಕಟ್ಟಡ ನಿರ್ಮಾಣದ ಒತ್ತುವರಿಯನ್ನು ತಡೆಯಲು ಕೋರಿದರು.
ಕ್ರಮ: ಸಕಾಅ, ಬೃನೀ.ಗಾಲುವೆ

ವಿದ್ಯಾರಣ್ಯಪುರ ಮುಖ್ಯ ರಸ್ತೆಯಲ್ಲಿ ಬರುವ ಅಡ್ಡರಸ್ತೆಯ ತಿರುವಿನಲ್ಲಿ ತಳ್ಳುವ ಗಾಡಿ ಇರುವುದರಿಂದ ಅಪಘಾತಗಳು ಹೆಚ್ಚಾಗುತ್ತಿರುತ್ತದೆ ಆದ್ದರಿಂದ ಅಡ್ಡರಸ್ತೆಯ ತಿರುವಿನಲ್ಲಿ ಇಟ್ಟಿರುವ ತಳ್ಳುವ ಗಾಡಿಗಳನ್ನು ತೆರವುಗೊಳಿಸಲು ಕೋರಿದರು.
ಸೋಮಣ್ಣ ಗಾರ್ಡನ್ 1ನೇ ಅಡ್ಡರಸ್ತೆಯಲ್ಲಿ ಚರಂಡಿಯನ್ನು ರಸ್ತೆ ಮಟ್ಟಕ್ಕೆ ಎತ್ತರಿಸಲು, ಸರ್.ಎಂ.ವಿ ಲೇಔಟ್ 8ನೇ ಅಡ್ಡರಸ್ತೆಯಲ್ಲಿ ಹೊಸದಾಗಿ ಚರಂಡಿ ನಿರ್ಮಾಣ ಮಾಡಲು ಹಾಗೂ ಸಪ್ತಗಿರಿ ಲೇಔಟ್ 3ನೇ ಅಡ್ಡರಸ್ತೆಯಲ್ಲಿ, ಕೆನರಾ ಬ್ಯಾಂಕ್ ಲೇಔಟ್ 8ನೇ ಎ ಅಡ್ಡರಸ್ತೆಯಲ್ಲಿ ಕಲ್ವರ್ಟ್ ನಿರ್ಮಿಸಲು ಕೋರಿದರು.
ಕ್ರಮ: ಸಕಾಅ, ವಿಉವಿ

ಜ್ಞಾನೇಶ್ವರಿ ಬಡಾವಣೆಯಲ್ಲಿ ರಸ್ತೆ ಗುಡಿಸುವಿಕೆ ಕಾರ್ಯ ಸಮರ್ಪಕವಾಗಿ ನಿರ್ವಹಿಸಲು, ಮುನಿಸ್ವಾಮಪ್ಪ ಲೇಔಟ್ ನರ್ಸರಿ ಪಕ್ಕ ಮತ್ತು ಜಾಯ್ ಸ್ಕೂಲ್ ಹತ್ತಿರವಿರುವ ಬ್ಲಾಕ್‌ಸ್ಪಾಟ್ ತೆರವುಗೊಳಿಸುತ್ತಿರುವುದಿಲ್ಲ,
ಕ್ರಮ: ಸಕಾಅ, ಘ.ತ್ಯಾ.ನಿ

**ನೋಡೆಲ್ ಅಧಿಕಾರಿ:** ಶ್ರೀ ಶಿವಕುಮಾರ್ ಗೌಡರ್ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

Assistant Executive Engineer
Vidyaranyapura Sub-Division
BBMP, Bangalore-97